ಜಾಗ್ರತೆಯಿಂದ ಖರ್ಚು ಮಾಡಿದರೂ ಮೂರು ದಿನ ಕಳೆಯುವುದೇ ಕಷ್ಟವಾಗಿತ್ತು. ಹಾಗೆಯೇ ನಾಲ್ಕು ಐದನೇ ದಿನಗಳು. ತಾನಾದರೆ ಇನ್ನೂ ಎರಡು ದಿನ ಕಳೆದೇನು. ನೀರು ಕುಡಿದೇ ಬದುಕಿಯೇನು... ಆದರೆ ಮಗನಿಗೆ... ಶಾಲೆಯಿಂದ ಸಂಜೆ ಬಸವಳಿದು ಬಂದ ಮಗನಿಗೆ ಕೊಡಲು ಮನೆಯಲ್ಲಿ ಏನೂ ಇಲ್ಲ. ಅದೇ ಸಂಕಟದಲ್ಲಿ ಆ ತಾಯಿ ನಲುಗಿ ಹೋಗಿದ್ದಳು. ಒಂದು ದಿನವಂತೂ ಮನೆಯ ಸುತ್ತ ಇದ್ದ ಹಾಡಿ ಮತ್ತು ಬಯಲುಗಳನ್ನು ಸುತ್ತಿ ಅಲ್ಲಿಂದೊಂದಿಷ್ಟು ಸೊಪ್ಪನ್ನು ಹರಿದು ತಂದು ಬೇಯಿಸಿ ಕೊಟ್ಟಿದ್ದಳು. ಮತ್ತೆ ಆ ಸೊಪ್ಪುಗಳಲ್ಲಿ ತಿನ್ನಬಾರದಂತಹ ಸೊಪ್ಪು ಏನಾದರೂ ಸೇರಿರಬಹುದೇನೋ ಎಂದು ರಾತ್ರಿಯಿಡೀ ಕಣ್ಣಿಗೆ ಎಣ್ಣೆ ಹಾಕಿಕೊಂಡು ಕಾದಿದ್ದಳು ಮಗನನ್ನು.

★★★

ಎಂದೂ ಹೆಸರು ಹೇಳದ ಅಮ್ಮನ ಆ ಉದ್ಯೋಗದ ಸಂಪಾದನೆಯಲ್ಲಿ ಕಷ್ಟಪಟ್ಟು ಓದಿದವನಿಗೆ ಎಸ್ಸೆಸ್ಸೆಲ್ಸಿಯಲ್ಲಿ ಸಿಕ್ಕಿದ ಮಾರ್ಕುಗಳಿಂದಾಗಿ ಸುಲಭದಲ್ಲಿಯೇ ಸಾರ್ವಜನಿಕ ಹಾಸ್ಟೆಲಿನಲ್ಲಿ ಉಚಿತ ಪ್ರವೇಶ ಸಿಕ್ಕಿತ್ತು. ಅಷ್ಟೇ ಅಲ್ಲ ಕಾಲೇಜಿನವರು ಕೂಡ ಮರು ಮಾತನಾಡದೆಯೇ ಸೀಟು ಕೊಟ್ಟಿದ್ದರು. ದಿನದ ಊಟಕ್ಕೆ ಪರದಾಡುವಂತಹ ಪರಿಸ್ಥಿತಿಯಿಲ್ಲದ ಆ ದಿನಗಳಲ್ಲಿ ಅವನ ಪ್ರತಿಭೆ ಅರಳಿತ್ತು. ಅದೂ ಎಲ್ಲರ ಗಮನವನ್ನು ಸೆಳೆಯುವ ಮಟ್ಟದಲ್ಲಿ.

ಕಾಲೇಜಿನ ಮಕ್ಕಳಿಲ್ಲದ ಪ್ರೊಫೆಸರೊಬ್ಬರು ಇಂತಹವನೊಬ್ಬ ತಮ್ಮ ಕಾಲೇಜಿನಲ್ಲಿ ಇದ್ದಾನೆಂದು ತಿಳಿದವರೇ ಇವನ ಬಗ್ಗೆ ಆಸಕ್ತಿ ತೋರಿಸಲು ತೊಡಗಿದವರು ಒಂದು ದಿನ ತಾವಾಗಿಯೇ ಅವನನ್ನು ಆಫೀಸಿನಲ್ಲಿನ ತಮ್ಮ ಮೇಜಿನ ಹತ್ತಿರಕ್ಕೆ ಕರೆಸಿಕೊಂಡಿದ್ದರು. ಒಂದೈದು ನಿಮಿಷದ ಮಾತು ಕತೆಯಲ್ಲಿಯೇ ಅವನಲ್ಲಿ ಹುದುಗಿದ ಪ್ರತಿಭೆಯನ್ನು ಕಂಡುಕೊಂಡ ಅವರು ಅವನ ಮನೆಯ ಪರಿಸ್ಥಿತಿಯನ್ನೂ ತಿಳಿದುಕೊಂಡು ಮುಂದೆ ತಾನೇ ಅವನ ಜವಾಬ್ದಾರಿಯನ್ನು ಹೊರುವುದಾಗಿ ಲೆಕ್ಚರುಗಳು ಮತ್ತು ಪ್ರೊಫೆಸರುಗಳು ತುಂಬಿದ್ದ ಆ ಹಾಲಿನಲ್ಲಿಯೇ ಘೋಷಿಸಿದ್ದರು.

ಹುಡುಗನಿಗೆ ಆಶ್ಚರ್ಯ. ಹಿಂದೆ ಮುಂದೆ ಏನೂ ತಿಳಿಯದ ತನ್ನಂಥವನ ಜವಾಬ್ದಾರಿ ಹೊರಲು ಪ್ರೊಫೆಸರೊಬ್ಬರು ತಯಾರಾದದ್ದು ಅವನಿಗೆ ನುಂಗಲಾರದ ತುತ್ತೇ ಆಗಿತ್ತು. ಕಷ್ಟದಲ್ಲಿಯೇ ಬೆಳೆದವನು. ಹುಟ್ಟಿದಂದಿನಿಂದ ತಿಳಿದಿದ್ದ ಜನರ ನಡುವೆಯೇ ಇದ್ದರೂ ಯಾರೂ ಇವನ ಮತ್ತು ಇವನ ತಾಯಿಯ ಕಷ್ಟಕ್ಕೆ ಆದವರಿಲ್ಲ. ಅಂತಹುದರಲ್ಲಿ ತಿಂಗಳೆರಡು ತಿಂಗಳುಗಳ ಸಂಪರ್ಕ. ಅದೂ ತನ್ನ ತರಗತಿಗೆ ಬರುವವರೂ ಅಲ್ಲ. ಅಂತಹ ಪ್ರೊಫೆಸರ್ ಒಬ್ಬರು ದಿಢೀರ್ ಅಂತ ಜವಾಬ್ದಾರಿ ಹೊರುತ್ತೇನೆ ಎಂದರೆ... ನಂಬಲೇ ಸಾಧ್ಯವಾಗದ ವಿಷಯ ಅವನಿಗೆ.

ಇವನ ಮುಖದ ಮೇಲೆ ಅಂತಹ ಭಾವನೆಯೊಂದು ಪ್ರಕಟವಾಗುತ್ತಿದ್ದನ್ನು ಗಮನಿಸಿದ ಅಲ್ಲಿಯೇ ಇದ್ದ ಇವನ ಕ್ಲಾಸಿಗೆ ಬರುತ್ತಿದ್ದ ಲೆಕ್ಚರರ್ ಒಬ್ಬರು ಪರಿಸ್ಥಿತಿಯನ್ನು ತಿಳಿಯಾಗುವಂತೆ ಮಾಡಿದ್ದರು. 'ಪ್ರೊಫೆಸರ್ ಹಾಗೆಲ್ಲ ಯಾರು ಯಾರಿಗೋ ಸಹಾಯ ಮಾಡುವವರಲ್ಲ. ನಿನ್ನ ಟ್ಯಾಲೆಂಟ್, ಕಷ್ಟ ಮತ್ತು ಪರಿಸ್ಥಿತಿಯನ್ನು ನೋಡಿಕೊಂಡು ಅವರಾಗಿಯೇ ಘೋಷಿಸಿದ್ದಾರೆ... ಅವರ ಒಳ್ಳೆಯತನ, ಔದಾರ್ಯದ ಹೊರತಾಗಿ ಅದಕ್ಕೆ ಬೇರೆ ಯಾವ ಕಾರಣವೂ ಇಲ್ಲ. ನೀನು ನಿಯತ್ತಿನಿಂದ ನಡೆದುಕೋ ಅಷ್ಟೆ' ಎಂದಿದ್ದರು.

ಕಷ್ಟವೇ ಬದುಕಿನ ಭಾಗವಾಗಿದ್ದು ಪ್ರಪಂಚದಲ್ಲಿನ ಒಳಿತು ಕೆಡಕುಗಳ ಬಗ್ಗೆ ಚಿಂತಿಸುವಷ್ಟು ವ್ಯವಧಾನವಿದ್ದಿರದ ಅವನಿಗೆ ಈಗ ಪ್ರಥಮ ಬಾರಿಗೆ ಅನ್ನಿಸಿತ್ತು. 'ಇಂತಹವರೂ ಇರುತ್ತಾರೆಯೇ... ಬಹುಶಃ ದೇವರೆಂದರೆ ಇಂತಹವರೇ ಇರಬೇಕು...' ಎಂದು.

ಅಂದಿನಿಂದಲೇ ಇವ ತನ್ನ ತರಗತಿಗೆ ಎಂದೂ ಬರದಿದ್ದ ಆ ಪ್ರೊಫೆಸರ್‌ರ ಪಟ್ಟ ಶಿಷ್ಯನಾಗಿದ್ದ. ಅವರ ಪ್ರಯತ್ನದಿಂದಲೇ ಸಾಮಾನ್ಯವಾಗಿ ಕಷ್ಟಸಾಧ್ಯವಾಗಿದ್ದ ಸ್ಕಾಲರ್‌ಶಿಪ್ಪೂ ಸಿಗುವಂತೆ ಆಗಿತ್ತು.